ದಿನಾಂಕ 11-02-2016 ರಂದು ನಡೆದ ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ) ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದವರು:-

1) ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ),
2) ಶ್ರೀ ಶಂಕರ್ ಆರ್. ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು,
3) ಶ್ರೀ ಜಿ.ಸಿ. ವೃಷಭೇಂದ್ರಮೂರ್ತಿ, ಕಾರ್ಯದರ್ಶಿಗಳು,
4) ಶ್ರೀಮತಿ ಶ್ರೀಲತಾ ಕೋಟಿಮಠ್, ಅಧೀನ ಕಾರ್ಯದರ್ಶಿಗಳು,

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

**ಕರ್ನಾಟಕ ಮಾಹಿತಿ ಆಯೋಗದಲ್ಲಿನ ಉತ್ತಮ ಗುಣಮಟ್ಟದ ಆದೇಶದ ಪ್ರತಿ/ಛಾಯಾಪ್ರತಿಗಳನ್ನು ಅಂತರ್‌ಜಾಲದ ಮುಖಾಂತರ ನೀಡುವ ಬಗ್ಗೆ.**

ದಿ: 19-12-2015 ರಂದು ನಡೆದ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ) ಶ್ರೀ ಟಿ. ರಮಾನಾಯ್ಕ್ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇದೇ ವಿಷಯದ ಬಗ್ಗೆ ಚರ್ಚಿಸಿದ್ದು, ಶ್ರೀಮತಿ ಸಂಗೀತ, ಎನ್‌ಐಸಿಯ ವಿಜ್ಞಾನಿ ಇವರು ತಮ್ಮ ದಿ: 30-12-2015ರ ಇ-ಮೇಲ್‌ನಲ್ಲಿ ನೀಡಿದ ಅಭಿಪ್ರಾಯವನ್ನು ಮಾನ್ಯ ಕಾರ್ಯದರ್ಶಿಗಳು ಸಭೆಯಲ್ಲಿ ತಿಳಿಸುತ್ತಾ, ಎನ್‌ಐಸಿಯವರು ಈ ಕೆಳಕಂಡ ಎಲ್ಲಾ ಅಂಶಗಳಿಗೆ ಸಾಫ್ಟ್‌ವೇರ್‌ನ್ನು ತಯಾರಿಸಲು ಒಪ್ಪಿರುವ ಬಗ್ಗೆ ಸಭೆಗೆ ತಿಳಿಸುತ್ತಾ, ಈ ಕೆಳಕಂಡ ಎಲ್ಲಾ ಅಂಶಗಳನ್ನು ಪ್ರಾಯೋಗಿಕವಾಗಿ ಆಯೋಗಕ್ಕೆ ನೀಡಲು ಅವರು ಒಪ್ಪಿರುವ ಬಗ್ಗೆಯೂ ಸಭೆಗೆ ತಿಳಿಸಿದರು.

1) ಅರ್ಜಿದಾರರು ಹಾಗೂ ಪ್ರತಿವಾದಿಗಳ ಪೂರ್ತಿ ವಿವರಗಳನ್ನು ಪಿಎಲ್‌ಓದಲ್ಲಿ ಕನ್ನಡದಲ್ಲಿಯೂ ಒದಗಿಸುವಂತೆ ಮಾರ್ಪಾಡನ್ನು ಮಾಡುವುದು.

2) ಕರ್ನಾಟಕ ಮಾಹಿತಿ ಆಯೋಗದ ಆದೇಶಗಳ ಗುಣಮಟ್ಟ ಹೆಚ್ಚಿಸಲು ಅದರಲ್ಲಿ ಕಿರು ಬದಲಾವಣೆಗಳನ್ನು ಮಾಡುವುದು.

3) ಈ ಅಂಶಗಳನ್ನು ಪೂರ್ವಾಧಾರಿತವಾಗಿಯೇ ಗಣಕಯಂತ್ರದಲ್ಲಿ ಫಾರ್ಮೆಟ್ ಮಾದರಿಯಲ್ಲಿ ತಯಾರಾಗಿರಿಸಿ ನ್ಯಾಯಾಲಯ ಸಭಾಂಗಣದಲ್ಲಿ ತೀರ್ಪುಬರಹಗಾರರು ಕೇವಲ ಪ್ರಕರಣ ಸಂಖ್ಯೆ ಮತ್ತು ಅರ್ಜಿದಾರರು/ಪ್ರತಿವಾದಿಗಳ ಹೆಸರಿನ ಅಂಶವನ್ನಷ್ಟೇ ತುಂಬಿ ಉಳಿದಂತಹ ಎಲ್ಲಾ ಮಾಹಿತಿಯನ್ನು ಕೋಡ್‌ಗಳ ಮೂಲಕ ನಮೂದು ಮಾಡುವುದು.

4) ಹೀಗೆ ಕೋಡ್‌ಗಳ ಮುಖಾಂತರ ನಮೂದಾದಂತಹ ಆದೇಶಗಳನ್ನು ಮಾನ್ಯ ಆಯುಕ್ತರ ಗಮನಕ್ಕೆ ತಂದು ಅಂತರ್‌ಜಾಲದಲ್ಲಿ ಅಳವಡಿಸುವುದು.

5) ಹೀಗೆ ಅಳವಡಿಸುವಂತಹ ಆಯೋಗದ ಆದೇಶಗಳ ಮೂಲ ಪ್ರತಿಗಳು ಕಡತದಲ್ಲಿ ಲಭ್ಯವಿದ್ದು, ಅವುಗಳನ್ನು ಅರ್ಜಿದಾರರು ಮತ್ತು ಪ್ರತಿವಾದಿಗಳಿಗೆ ಅಂಚೆ ಮೂಲಕ ಕಳುಹಿಸಿಕೊಡಲಾಗುವುದು. ಉಳಿದಂತೆ ಅಂತರ್‌ಜಾಲದಲ್ಲಿ ಸಹಿರಹಿತ ಅರ್ಜಿಗಳನ್ನು ಅಪ್‌ಲೋಡ್ ಮಾಡಬಹುದಾಗಿರುತ್ತದೆ.

6) ಆಯೋಗದ ಎಲ್ಲಾ ನ್ಯಾಯಾಲಯ ಸಭಾಂಗಣದ ಆದೇಶಗಳನ್ನು ಒಂದೇ ರೀತಿಯದನ್ನಾಗಿ ಮಾಡಿದಲ್ಲಿ, ಪ್ರಕರಣಗಳು ಒಂದು ಸಭಾಂಗಣದಿಂದ ಮತ್ತೊಂದು ಸಭಾಂಗಣಕ್ಕೆ ವರ್ಗಾವಣೆಯಾದಾಗ ತೊಂದರೆ ತಪ್ಪಿಸಬಹುದಾಗಿರುತ್ತದೆ.

7) ಪಾರ್ಟ್‌ಹರ್ಡ್ ಪ್ರಕರಣಗಳಲ್ಲಿ ಈಗಾಗಲೇ ಅರ್ಜಿದಾರರ ಮತ್ತು ಪ್ರತಿವಾದಿಗಳ ಹೆಸರು ವಿಳಾಸ ಇದ್ದು, ಅದನ್ನು ಕೇವಲ Word Document ನಿಂದ copy ಮಾಡಬೇಕಾಗಿರುತ್ತದೆ.

8) ಅರ್ಜಿದಾರರು 19(3)ರಡಿ ಪ್ರಕರಣಗಳನ್ನು ದಾಖಲು ಮಾಡುವಾಗಲೇ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳ ಪರಿಶೀಲನೆಯನ್ನು ಆಯೋಗದ ಸ್ವೀಕೃತಿ ಕೇಂದ್ರದಲ್ಲಿಯೇ ಮಾಡಿ ಅದರಲ್ಲಿನ ತಪ್ಪುಗಳನ್ನು ತಿದ್ದಲು ಅರ್ಜಿದಾರರಿಗೆ ಹಿಂದಿರುಗಿಸಬಹುದಾಗಿರುತ್ತದೆ. ತದನಂತರ ಅದೇ ಅರ್ಜಿಗಳಿಗೆ ಪ್ರಕರಣ ಸಂಖ್ಯೆಗಳನ್ನು ನೀಡಿ ಅವುಗಳನ್ನು ದ್ವಿತೀಯ ಹಂತದ ಪರಿಶೀಲನಾ ವಿಭಾಗಕ್ಕೆ ಕಳುಹಿಸಿಕೊಡುತ್ತಾ, ಈ ಪ್ರಕರಣಗಳಲ್ಲಿ ದ್ವಿತೀಯ ಹಂತದಲ್ಲಾಗುವಂತಹ ಆಕ್ಷೇಪಣೆಗಳಿಗೆ ಆಕ್ಷೇಪಣಾ ಅರ್ಜಿ ತಯಾರಿಸಿ ನೀಡಬಹುದಾಗಿರುತ್ತದೆ. ಹಾಗಾಗಿ, ಅರ್ಜಿಗಳ ಪರಿಶೀಲನೆ ಮತ್ತು ಪ್ರಕರಣ ಸಂಖ್ಯೆಗಳ ನೀಡಿಕೆ ಸುಗಮವಾಗುವುದಲ್ಲದೆ ಅರ್ಜಿದಾರರಿಗೆ ತುರ್ತಾಗಿ ಪ್ರಕರಣ ಸಂಖ್ಯೆಗಳು ದೊರೆಯುತ್ತವೆ.

ಕ್ರಮ: ಎನ್‌ಐಸಿಯ ವಿಜ್ಞಾನಿ-ಸಿ/ಪ್ರೋಗ್ರಾಮರ್ ಮತ್ತು ಕಾರ್ಯದರ್ಶಿ

(signature) 12/4/2016

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)